ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

1. ನನಗೆ ಸರ್ಕಾರದಿಂದ ವೃದ್ಧಾಪ್ಯ ವೇತನ ಬರುತ್ತಿರುತ್ತದೆ ಎಂದರೆ ಸರಿ. ಗೃಹಲಕ್ಷ್ಮೀ ಯೋಜನೆಯಡಿ ನನಗೆ ರೂ. 2000/- ಬರುತ್ತಿರುತ್ತದೆ ಎಂದರೆ ಸರಿ. ನನಗೆ ತಿಂಗಳಿಗೆ ರೂ.1200/- ವೃದ್ಧಾಪ್ಯ ವೇತನ ಬರುತ್ತಿರುತ್ತದೆ. ವೃದ್ಧಾಪ್ಯ ವೇತನವನ್ನುಪಡೆದುಕೊಳ್ಳಲು ಬಿಡದಿಯಲ್ಲಿ ಇರುವ ಬ್ಯಾಂಕ್ ಗೆ ಹೋಗಿ ಪಡೆದುಕೊಳ್ಳುತ್ತೇನೆ ಆದರೆ ಬ್ಯಾಂಕ್ ನ ಹೆಸರು ಹೇಳಲು ಬರುವುದಿಲ್ಲ, ಸದರಿ ಹಣವನ್ನು ಪಡೆದುಕೊಳ್ಳಲು ಇತರರೊಂದಿಗೆ ಹೋಗಿ ಪಡೆದುಕೊಳ್ಳುತ್ತಿರುತ್ತೇನೆ. ಒಮ್ಮೆ ನನ್ನ ಮೊಮ್ಮಗನನ್ನು ಕರೆದುಕೊಂಡು ಹೋಗಿರುತ್ತೇನೆ. ವೃದ್ಧಾಪ್ಯ ವೇತನವನ್ನು ಪಡೆದುಕೊಳ್ಳಲು ನನ್ನ ಮೊಮ್ಮಗನಿಗೆ ಹೇಳಿ ಕರೆದುಕೊಂಡು ಹೋಗುತ್ತೇನೆ ಎಂದರೆ ಅವನು ಇದ್ದಾಗ ಅವನಿಗೆ ಹೇಳಿ ಕರೆದುಕೊಂಡು ಹೋಗುತ್ತೇನೆ, ಅವನು ಇಲ್ಲದೇ ಇರುವಾಗ ಬೇರೆಯವರನ್ನು ಕರೆದುಕೊಂಡು ಹೋಗುತ್ತೇನೆ.

2. ನಾನು ಮೂಲತಃ ಇಟ್ಟಮಡು ಗ್ರಾಮದವರಾಗಿರುತ್ತೇನೆ ಎಂದರೆ ಸರಿ. ನಾನು ನಮ್ಮ ಊರಿನಿಂದ ಇತರೆ ಕೆಲಗಳಿಗೆ ಹೋಗಬೇಕದಾಲ್ಲಿ ಬಿಡದಿಗೆ ಬಂದೇ ಹೋಗುತ್ತೇನೆ ಎಂದರೆ ಸರಿ. ನಾನು ಈ ದಿನ ನನ್ನ ಮಗನಾದ ಶಿವಕುಮಾರ್ ರವರ ಜೊತೆ ಬಂದಿರುತ್ತೇನೆ. ನಾನು ಯಾವುದೇ ಕೆಲಸಕ್ಕೆ ಹೋಗಬೇಕಾದರೆ ನನ್ನ ಚಿಕ್ಕ ಮಗ ಮತ್ತು ಮಗಳನ್ನು ಕರೆದುಕೊಂಡು ಹೋಗುತ್ತೇನೆ ಎಂದರೆ ಸಾಕ್ಷಿ ಮಗ ಇದ್ದಾಗ ಬರುತ್ತಾನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ದಿನ ನ್ಯಾಯಾಲಯಕ್ಕೆ

ಬರುವ ಮುನನ್ನ ನಿಮ್ಮ ಚಿಕ ಮಗನಿಗೆ ನಾನು ನ್ಯಾಯಾಲಯಕ್ಕೆ ಹೋಗಿ ಸಾಕ್ಷಿ ಹೇಳಬೇಕಾಗುತ್ತದೆ ಬಾ ಎಂದು ಕರೆದಿರುತ್ತೇನೆ ಎಂದರೆ ಸಾಕ್ಷಿಯು ನಾನು ಆಟೋದಲ್ಲಿ ಬರುತ್ತಿದ್ದೆ, ಹಾಗೆ ನನ್ನ ಮಗನನ್ನು ಕರೆದುಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನೀವು ಆಟೋದಲ್ಲಿ ಪ್ರಯಾಣಿಸುತ್ತಿರುವ ಸಮಯದಲ್ಲಿ ನೀವು ಎಲ್ಲಿಗೆ ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ ಎಂದರೆ ಹೌದು ಕೋರ್ಟ್ ಗೆ ಹೋಗುತ್ತಿದ್ದೇನೆ ಎಂದು ತಿಳಿಸಿರುತ್ತೇನೆ.

3. ಈ ಹಿಂದೆ ನೀವು ನಿಮ್ಮ ದೊಡ್ಡ ಮಗನ ವಿರುದ್ಧ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಹೌದು. ರಾಮನಗರ ಪೊಲೀಸ್ ಭವನದಲ್ಲಿ ಇರುವ ಹಿರಿಯ ನಾಗರೀಕರ ಸಹಾಯಕವಾಣಿ ಅಧಿಕಾರಿಗಳಿಗೆ ನಿಮ್ಮ ಮಗನ ವಿರುದ್ಧ ದೂರು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದ 1ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಸೇರಿ ನಾನು ವಾಕ್ ಮತ್ತು ಹೊಲಕ್ಕೆ ಹೋದಾಗಲೆಲ್ಲಾ ಅಲ್ಲೆ ಮಾಡುತ್ತಿದ್ದರಿಂದ ನಾನು ಅವರ ವಿರುದ್ಧ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 19.01.2021 ರಂದು ದೂರು ಕೊಟ್ಟ ದಿನವೇ ನೀವು ನಿಪಿ-1ರ ದಾನ ಪತ್ರದ ನಕಲನ್ನು ನೋಂದಣಿ ಕಛೇರಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಯಾವುದೇ ದಾನ ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

4. ನಾನು ಮದುವೆಯಾಗಿ ನನ್ನ ಗಂಡನ ಮನೆಗೆ ಹೋದಾಗ ನನ್ನ ಅತ್ತೆ ಮತ್ತು ಮಾವ ರವರು ಇದ್ದರು ಅವರನ್ನು ನಾನು ನೋಡಿರುತ್ತೇನೆ. 1ನೇ ಪ್ರತಿವಾದಿರವರಿಗೆ 7-8 ವರ್ಷ ಇದ್ದ

ಸಮಯದಲ್ಲಿ ಅವರು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮಾವ ಮಂಚಯ್ಯನವರ ಹೆಸರು ನನಗೆ ತಿಳಿದಿರುವುದಿಲ್ಲ. ನಮ್ಮ ಮಾವನವರಿಗೆ ಗಳಗಂಟೆ ಮಂಚಯ್ಯ ಎಂದು ಕರೆಯುತ್ತಿದ್ದರು ಎಂದರೆ ಸರಿ. ಮಂಚಯ್ಯನವರಿಗೆ ಇಬ್ಬರು ಗಂಡು ಮಕ್ಕಳು ನನ್ನ ಗಂಡ ಸಾವಂದಯ್ಯ ಮತ್ತು ವೀರಭದ್ರಯ್ಯ ಎಂದರೆ ಸರಿ. ಸಾವಂದಯ್ಯ ಮತ್ತು ವೀರಭದ್ರಯ್ಯ ಇಬ್ಬರೂ ಜಂಟಿಯಾಗಿ ದಿನಾಂಕ 02.02.1967 ರಲ್ಲಿ ಹೆಗ್ಗಡೆಗೆರೆ ಗ್ರಾಮದ ಸರ್ವೇ ನಂಬರ್ 256 ರಲ್ಲಿ 2 ಎಕರೆ ಜಮೀನನ್ನು ಬಿಡದಿ ಹೋಬಳಿ ಹೆಗ್ಗಡಗೆರೆ ದಾಖಲೆ ಅಂಗರಹಳ್ಳಿ ಗ್ರಾಮದ ಹುಚ್ಚವೀರಯ್ಯನ ಮಕ್ಕಳಾದ ಭದ್ರಯ್ಯ ಮತ್ತು ಈರಯ್ಯ ಉಃ ಮೂಗಯ್ಯನವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 12.08.2004 ರಂದು ನನ್ನ ಗಂಡ ಸಾವಂದಯ್ಯ ಮತ್ತು ವೀರಭದ್ರಯ್ಯ ಇಬ್ಬರು ಸೇರಿ ಖರೀದಿಸಿದ 2 ಎಕರೆ ಜಮೀನನ್ನು ವಿಭಾಗ ಪತ್ರದ ಮೂಲಕ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಹಿರಿಕರ ಆಸ್ತಿಯನ್ನು ಭಾಗ ಮಾಡಿಕೊಂಡಿರುತ್ತಾರೆ ಆದೇನೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ದಾವಾ ಆಸ್ತಿಯು ನನ್ನ ಗಂಡ ಸಾವಂದಯ್ಯನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಕುಟುಂಬದ ಆಸ್ತಿಗಳನ್ನು ನಿಪಿ-4 ರಂತೆ ವಿಭಾಗ ಮಾಡಿಕೊಂಡು ದಾವಾ ಆಸ್ತಿಯನ್ನು ಸದರಿ ಸಾವಂದಯ್ಯನವರು ನಿಮ್ಮ ಹೆಸರಿಗೆ ಉಳಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಆಸ್ಪತ್ರೆಗೆಂದು ಕರೆದುಕೊಂಡು ಬಂದು ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಾಕ್ಷಿ ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.